# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 850 |
| ಉತ್ತರ ದಿನಾಂಕ | : | 14.07.2023 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಉಲ್ಬಣಗೊಂಡಿದ್ದು, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿವೆ; | ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಸರ್ಕಾರದಿಂದ ನಿರಂತರ ನಿಗಾವಹಿಸಿ ಕ್ರಮ ಕೈಗೊಳ್ಳಲಾಗುತ್ತಿದ್ದು, ಸಮಸ್ಯಾತ್ಮಕ ಜನವಸತಿಗಳಿಗೆ ಹೆಚ್ಚುವರಿ ಜಲಮೂಲ ಸ್ಥಾಪಿಸಿ, ಇಲ್ಲವಾದ್ದಲ್ಲಿ ಬಾಡಿಗೆ ಮೇಲೆ ಕೊಳವೆ ಬಾವಿಗಳನ್ನು ಪಡೆದು ಹಾಗೂ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಜಲಜೀವನ್ ಮಿಷನ್, ಸ್ವಚ್ಛಭಾರತ ಅಭಿಯಾನ, ನರೇಗಾ, ನಮ್ಮ ಗ್ರಾಮ-ನಮ್ಮ ರಸ್ತೆ ಮತ್ತು (ವಿಶೇಷ ಅಭಿವೃದ್ಧಿ ಯೋಜನೆ) ಯೋಜನೆಗಳು ಜಾರಿಯಲ್ಲಿ ಇದೆಯೇ; ಹಾಗಿದ್ದಲ್ಲಿ, ಈ ಯೋಜನೆಗಳು ಯಾವ ಹಂತದಲ್ಲಿವೆ ಮತ್ತು ಯೋಜನೆ ಅನುಷ್ಠಾನಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು ಹಾಗೂ ಇರುವರೆಗೂ ಖರ್ಚುಮಾಡಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು) | ರಾಜ್ಯದಲ್ಲಿ ಜಲಜೀವನ್ ಮಿಷನ್ ಯೋಜನೆಯು ಆಗಸ್ಟ್ 2019 ರಿಂದ ಜಾರಿಗೆ ಬಂದಿದ್ದು, ಪ್ರಸ್ತುತ ರಾಜ್ಯದ ಒಟ್ಟು 101.17 ಲಕ್ಷ ಗ್ರಾಮೀಣ ಮನೆಗಳ ಪೈಕಿ 69.52 ರಷ್ಟು ಮನೆಗಳಿಗೆ ಈಗಾಗಲೇ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸಲಾಗಿರುತ್ತದೆ.<br><br>ಸದರಿ ಯೋಜನೆಯ ಅನುಷ್ಠಾನಕ್ಕೆ ರೂ.73,434.40ಕೋಟಿಗಳ ಅನುದಾನವನ್ನು ಅಂದಾಜಿಸಲಾಗಿದ್ದು, ಈವರೆಗೆ ರೂ.10,326.43ಕೋಟಿಗಳಷ್ಟು ಖರ್ಚು ಮಾಡಲಾಗಿರುತ್ತದೆ. ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯು 02.10.2014ರಲ್ಲಿ ಜಾರಿಗೆ ಬಂದಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲಾ ಶೌಚಾಲಯ ರಹಿತ ಕುಟುಂಬಗಳಿಗೆ 19ನೇ ನವೆಂಬರ್ 2018ರ "ವಿಶ್ವ ಶೌಚಾಲಯ ದಿನ" ದಂದು ಗ್ರಾಮೀಣ ಕರ್ನಾಟಕವನ್ನು "ಬಯಲು ಬಹಿರ್ದೆಸೆ ಮುಕ್ತ" ಎಂದು ಘೋಷಿಸಲಾಯಿತು.<br><br>ಸದರಿ ಯೋಜನೆಯ ಮುಂದುವರೆದ ಭಾಗವಾಗಿ SBM-G Phase-II ಮಾರ್ಗಸೂಚಿಯನ್ನು ಜಾರಿಗೆ ತಂದಿದ್ದು, ಈ ಕಾರ್ಯಕ್ರಮದಡಿ ODF Plus ಹಂತವನ್ನು ಅನುಷ್ಠಾನ ಮಾಡಲು ವಿವಿಧ ಘಟಕಾಂಶಗಳಾದ ವೈಯಕ್ತಿಕ ಗೃಹ ಶೌಚಾಲಯಗಳು, ಸಮುದಾಯ ಶೌಚಾಲಯಗಳ ನಿರ್ಮಾಣ, ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ, Material Recovery Facility (MRF) ಘಟಕ ನಿರ್ಮಾಣ, ಮಲ ತ್ಯಾಜ್ಯ ನಿರ್ವಹಣಾ ಘಟಕಗಳ ನಿರ್ಮಾಣ (FSM) ಹಾಗೂ ಗೋಬರ್-ಧನ್ ಘಟಕಗಳ ನಿರ್ಮಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |

| ವರ್ಷ | ಮೀಸಲಿಟ್ಟ ಅನುದಾನ | ಖರ್ಚು ಮಾಡಿರುವ ಅನುದಾನ |
|---|---|---|
| 2018-19 | 1190.33 | 1059.00 |
| 2019-20 | 488.71 | 452.02 |
| 2020-21 | 235.86 | 386.29 |
| 2021-22 | 416.00 | 382.26 |
| 2022-23 | 416.00 | 214.40 |
| 2023-24 | 443.04 | 26.38 |
| ಒಟ್ಟು | **3189.94** | **2520.35** |

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ (ನರೇಗಾ) ಯೋಜನೆಯು 2006ನೇ ಸಾಲಿನಿಂದ ಜಾರಿಯಲ್ಲಿದ್ದು, 2023-24ನೇ ಸಾಲಿಗೆ 1300ಲಕ್ಷ ಮಾನವ ದಿನಗಳ ಸೃಜನೆಯ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ. ಈ ಯೋಜನೆಯಡಿ 2023-24ನೇ ಸಾಲಿಗೆ ಮೀಸಲಿಟ್ಟ ಅನುದಾನ ಹಾಗೂ ದಿನಾಂಕ:12.07.2023ರ ಅಂತ್ಯಕ್ಕೆ ಒಟ್ಟಾರೆ ಖರ್ಚು ಮಾಡಿರುವ ಅನುದಾನದ ವಿವರವನ್ನು ಈ ಕೆಳಗಿನಂತೆ ನೀಡಿದೆ.

(ರೂ.ಕೋಟಿಗಳಲ್ಲಿ)

| ಸಾಲು | ಮೀಸಲಿಟ್ಟ ಅನುದಾನ | ಖರ್ಚು |
|---|---|---|
| 2023-24 | 7257.47 | 2157.25 |

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮೀಣಾಭಿವೃದ್ಧಿ ಶಾಖೆಗೆ ಸಂಬಂಧಿಸಿದಂತೆ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠನಗೊಳಿಸಲಾಗುತ್ತಿದೆ.

ವಿವರಗಳು ಈ ಕೆಳಕಂಡಂತಿದೆ:

- **2016-17ನೇ** ಸಾಲಿನಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-4ರಡಿ ಅನುಮೋದನೆಗೊಂಡಿದ್ದು ಚಾಲ್ತಿಯಲ್ಲಿರುತ್ತವೆ. ಸದರಿ ಯೋಜನೆಯಡಿ 1630 ಸಂಖ್ಯೆಯ 4467.42ಕಿ.ಮೀ ಉದ್ದದ ಕಾಮಗಾರಿಗಳು ರೂ.3826.89ಕೋಟಿಗಳಿಗೆ ಅನುಮೋದನೆಯಾಗಿದ್ದು, ಈವರೆವಿಗೂ 1626 ಸಂಖ್ಯೆಯ 4377.70ಕಿ.ಮೀ ಉದ್ದದ ಕಾಮಗಾರಿಗಳನ್ನು ರೂ.3317.12ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಿದೆ. 73.65ಕಿ.ಮೀ ಉದ್ದದ ಕಾಮಗಾರಿಗಳನ್ನು ವಿವಿಧ ಕಾರಣಗಳಿಂದಾಗಿ ಕೈಬಿಡಲಾಗಿದೆ.

  ಪ್ರಸ್ತುತ 2023-24ನೇ ಸಾಲಿನಲ್ಲಿ 16.07ಕಿ.ಮೀ ಉದ್ದದ 4 ಸಂಖ್ಯೆಯ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.

- **2021-22ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ** 252 ಸಂಖ್ಯೆಗಳ 503.95 ಕಿ.ಮೀ ಉದ್ದದ ರಸ್ತೆ ಕಾಮಗಾರಿಗಳು ರೂ.263.35ಕೋಟಿಗಳಿಗೆ ಅನುಮೋದನೆಯಾಗಿದ್ದು, ಈವರೆವಿಗೂ 182 ಸಂಖ್ಯೆಗಳ 402.85ಕಿ.ಮೀ ಉದ್ದದ ಕಾಮಗಾರಿಗಳನ್ನು ರೂ.204.51ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಿದೆ.

  ಪ್ರಸ್ತುತ 2023-24ನೇ ಸಾಲಿನಲ್ಲಿ 101.10ಕಿ.ಮೀನ 70 ಸಂಖ್ಯೆಯ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.

ಸಂ:ಗ್ರಾಕುನೀ&ನೈಇ/33/ಅಧೀಕ್ಷಕರು-1/2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು